Subject Code : **21 (NS)**

# HISTORY

(Kannada and English Versions)

Time : 3 Hours 15 Minutes] [Total No. of questions : 37] [Max. Marks : 100

**(Kannada Version)**

**ಸೂಚನೆಗಳು :** *1.* ಪ್ರಶ್ನೆಗಳ ಕ್ರಮಸಂಖ್ಯೆಯನ್ನು ಸರಿಯಾಗಿ ನಮೂದಿಸುವುದು.

*2.* **ದೃಷ್ಟಿವಿಕಲಚೇತನ ವಿದ್ಯಾರ್ಥಿಗಳು ಭಾಗ-ಡಿ ಯಲ್ಲಿ ಭೂಪಟದ ಪ್ರಶ್ನೆಯಾದ ಕ್ರಮಸಂಖ್ಯೆ *31*(ಎ) ಬದಲಿಗೆ *31*(ಬಿ)ಯನ್ನು ಉತ್ತರಿಸುವುದು.**

*3.* ಪ್ರಶ್ನೆಯ ಸೂಚನೆಗಳಿಗನ್ವಯವಾಗಿ ಉತ್ತರಿಸುವುದು.

## ಭಾಗ – ಎ

I. ಈ ಕೆಳಗಿನ **ಪ್ರತಿಯೊಂದು** ಪ್ರಶ್ನೆಗೆ ಒಂದು **ಪದ** ಅಥವಾ ಒಂದು **ವಾಕ್ಯದಲ್ಲಿ** ಉತ್ತರಿಸಿ.

**(10 × 1 = 10)**

1) ಪ್ರಾಚೀನ ಕರ್ನಾಟಕದ ಮೇರೆ ಉಲ್ಲೇಖಿಸಿರುವ ಗ್ರಂಥವನ್ನು ಹೆಸರಿಸಿ.

2) ಪ್ರಥಮ ವೇದವನ್ನು ಹೆಸರಿಸಿ.

3) ಕುಶಾನರ ಮೂಲ ಸ್ಥಳ ಯಾವುದು?

4) ಚೋಳರ ಗ್ರಾಮಾಡಳಿತವನ್ನು ತಿಳಿಸುವ ಶಿಲಾಶಾಸನ ಯಾವುದು?

5) ಶಿವಾಜಿಯ ಬಿರುದು ಯಾವುದು?

6) ಬಹಮನಿ ಮನೆತನದ ಸ್ಥಾಪಕನನ್ನು ಹೆಸರಿಸಿರಿ.

7) ಬಸವೇಶ್ವರರ ಜನ್ಮಸ್ಥಳ ಯಾವುದು?

8) ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮ ನಡೆದ ವರ್ಷ ಯಾವುದು?

9) INA - ವಿಸ್ತರಿಸಿ ಬರೆಯಿರಿ.

10) ಆಲೂರು ವೆಂಕಟರಾಯರ ಪ್ರಸಿದ್ಧ ಕೃತಿ ಯಾವುದು?

## ಭಾಗ – ಬಿ

II. ಈ ಕೆಳಗಿನ ಯಾವುದಾದರೂ ಹತ್ತು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ 2 ಪದ ಅಥವಾ 2 ವಾಕ್ಯಗಳಲ್ಲಿ ಉತ್ತರಿಸಿರಿ. **(10 × 2 = 20)**

11) ಮಧ್ಯ ಶಿಲಾಯುಗದ ಯಾವುದಾದರೂ ಎರಡು ತಾಣಗಳನ್ನು ತಿಳಿಸಿ.

12) ಆರ್ಯರ ಯಾವುದಾದರೂ ಎರಡು ಆಶ್ರಮಗಳನ್ನು ಹೆಸರಿಸಿ.

13) ಬೌದ್ಧ ಧರ್ಮದ ಪ್ರಸಾರಕ್ಕಾಗಿ ಕಾನಿಷ್ಕನ ಯಾವುದಾದರೂ ಎರಡು ಕ್ರಮಗಳನ್ನು ಬರೆಯಿರಿ.

14) ಗುಪ್ತರ ಕಾಲದ ಯಾವುದಾದರೂ ಎರಡು ಹೆಸರಾಂತ ವಿಶ್ವವಿದ್ಯಾನಿಲಯಗಳನ್ನು ಹೆಸರಿಸಿ.

15) ಪಂಪನ ಯಾವುದಾದರೂ ಎರಡು ಕೃತಿಗಳನ್ನು ಹೆಸರಿಸಿ.

16) ದೆಹಲಿಯನ್ನು ಆಳಿದ ಯಾವುದಾದರೂ ಎರಡು ಸುಲ್ತಾನ ಸಂತತಿಗಳನ್ನು ಹೆಸರಿಸಿ.

17) ಶಿವಾಜಿಯ ತಂದೆ–ತಾಯಿ ಯಾರು?

18) ಮಹಮ್ಮದ್ ಗವಾನ್ ಯಾರು ಹಾಗೂ ಅವನು ಮದರಸಾವನ್ನು ಎಲ್ಲಿ ನಿರ್ಮಿಸಿದನು?

19) ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮಕ್ಕೆ ತಕ್ಷಣದ ಕಾರಣವೇನು?

20) ರೈತವಾರಿ ಪದ್ಧತಿ ಎಂದರೇನು?

21) ಪೂನಾ ಒಪ್ಪಂದಕ್ಕೆ ಸಹಿ ಹಾಕಿದವರು ಯಾರು?

22) ಜೆ.ವಿ.ಪಿ ಸಮಿತಿಯ ಯಾರಾದರೂ ಇಬ್ಬರು ಸದಸ್ಯರನ್ನು ಹೆಸರಿಸಿ.

## ಭಾಗ – ಸಿ

III. ಈ ಕೆಳಗಿನ **ಯಾವುದಾದರೂ ಆರು** ಪ್ರಶ್ನೆಗಳಿಗೆ **ಪ್ರತಿಯೊಂದಕ್ಕೆ 15 ರಿಂದ 20 ವಾಕ್ಯಗಳಲ್ಲಿ** ಉತ್ತರಿಸಿರಿ. https://www.karnatakaboard.com **(6 × 5 = 30)**

23) ಭಾರತದ ಇತಿಹಾಸದ ಮೇಲೆ ಭೂಗೋಳದ ಪ್ರಭಾವವನ್ನು ಸಂಕ್ಷಿಪ್ತವಾಗಿ ವಿವರಿಸಿ.

24) ಸಿಂಧೂ ಜನರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳನ್ನು ತಿಳಿಸಿರಿ.

25) ಹೊಸ ಧರ್ಮಗಳ ಉದಯಕ್ಕೆ ಕಾರಣವಾದ ಅಂಶಗಳಾವುವು?

26) ಹೊಯ್ಸಳ ವಾಸ್ತುಶೈಲಿಯ ಪ್ರಮುಖ ಲಕ್ಷಣಗಳನ್ನು ವಿವರಿಸಿ.

27) ಅಲ್ಲಾವುದ್ದೀನ್ ಖಿಲ್ಜಿಯ ಸುಧಾರಣೆಗಳನ್ನು ತಿಳಿಸಿ.

28) ಮಧ್ವಾಚಾರ್ಯರ ಜೀವನ ಮತ್ತು ಬೋಧನೆಗಳನ್ನು ವಿವರಿಸಿ.

29) ಸ್ವಾಮಿ ವಿವೇಕಾನಂದರ ವ್ಯಕ್ತಿತ್ವವನ್ನು ಚರ್ಚಿಸಿ.

30) ಭಾರತೀಯ ರಾಷ್ಟ್ರೀಯತೆಯ ಬೆಳವಣಿಗೆಗೆ ಕಾರಣವಾದ ಪ್ರಮುಖ ಅಂಶಗಳು ಯವುವು?

## ಭಾಗ – ಡಿ

IV. ಸೂಚನೆಗಳನ್ವಯ ಈ ಕೆಳಗಿನ ಪ್ರಶ್ನೆಯನ್ನು ಉತ್ತರಿಸಿ.

31) **(ಎ)** ನಿಮಗೆ ಒದಗಿಸಿರುವ ಭಾರತದ ಭೂಪಟದಲ್ಲಿ ಈ ಕೆಳಗಿನ **ಯಾವುದಾದರೂ ಐದು** ಐತಿಹಾಸಿಕ ಸ್ಥಳಗಳನ್ನು ಗುರುತಿಸಿ ಮತ್ತು ಗುರುತಿಸಿದ ಪ್ರತಿಯೊಂದು ಸ್ಥಳದ ಬಗ್ಗೆ ಎರಡು **ವಾಕ್ಯಗಳಲ್ಲಿ ವಿವರಣೆ** ಬರೆಯಿರಿ. **(5 + 5 = 10)**

a) ಹರಪ್ಪ

b) ಪಾಟಲೀಪುತ್ರ

c) ಕಂಚಿ

d) ಆಗ್ರಾ

e) ಬಿಜಾಪುರ

**f) ಮೀರತ್**

g) ಶ್ರೀರಂಗಪಟ್ಟಣ

h) ದಂಡಿ

**ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಮಾತ್ರ**

31) **(ಬಿ)** ಈ ಕೆಳಗಿನ ಪ್ರಶ್ನೆಯನ್ನು **30** ರಿಂದ **40** ವಾಕ್ಯಗಳಲ್ಲಿ ಉತ್ತರಿಸಿ. **(1 × 10 = 10)**

i) ಇಮ್ಮಡಿ ಪುಲಿಕೇಶಿಯ ಸಾಧನೆಗಳನ್ನು ವಿವರಿಸಿ.

ಅಥವಾ

ii) ಅಕ್ಬರನ ಸಾಧನೆಗಳನ್ನು ವಿವರಿಸಿ.

## ಭಾಗ – ಇ

V. ಈ ಕೆಳಗಿನ **ಯಾವುದಾದರೂ ಎರಡು** ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ **30** ರಿಂದ **40** ವಾಕ್ಯಗಳಲ್ಲಿ ಉತ್ತರಿಸಿ. **(2 × 10 = 20)**

32) ಅಶೋಕನ ಜೀವನ ಹಾಗೂ ಸಾಧನೆಗಳನ್ನು ವಿವರಿಸಿ.

33) ಕೃಷ್ಣದೇವರಾಯನ ಸಾಧನೆಗಳ ಬಗ್ಗೆ ಒಂದು ವಿವರಣೆ ಬರೆಯಿರಿ.

34) ಕರ್ನಾಟಿಕ್ ಯುದ್ಧಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

35) ಸರ್.ಎಂ. ವಿಶ್ವೇಶ್ವರಯ್ಯನವರನ್ನು 'ಆಧುನಿಕ ಮೈಸೂರಿನ ನಿರ್ಮಾತೃ' ಎಂದು ಕರೆಯಲಾಗಿದೆ. ವಿವರಿಸಿ.

## ಭಾಗ – ಎಫ್

VI. 36) ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ. **(5 × 1 = 5)**

1) 1ನೇ ರಾಜರಾಜ ಚೋಳ – ಕದಂಬ ವಂಶದ ಸ್ಥಾಪಕ
2) ಮಯೂರ ವರ್ಮ – ರಾಜರಾಜೇಶ್ವರಿ ದೇವಾಲಯ
3) ರಾಮಾನುಜಾಚಾರ್ಯ – ನವಕೋಟಿ ನಾರಾಯಣ
4) ದಾದಾಬಾಯಿ ನವರೋಜಿ – ವಿಶಿಷ್ಟಾದ್ವೈತ ಸಿದ್ಧಾಂತ
5) ಚಿಕ್ಕದೇವರಾಯ ಒಡೆಯರ್ – ಸಂಪತ್ತಿನ ಸೋರಿಕೆಯ ಸಿದ್ಧಾಂತ

37) ಈ ಕೆಳಗಿನ ಘಟನೆಗಳನ್ನು ಕಾಲಾನುಕ್ರಮದಲ್ಲಿ ಬರೆಯಿರಿ. **(5 × 1 = 5)**

1) ಶಿವಾಜಿಯ ಕಿರೀಟಧಾರಣೆ
2) ಪ್ಲಾಸಿ ಕದನ
3) ವಿಕ್ರಮಶಕೆ ಪ್ರಾರಂಭ
4) ಕ್ವಿಟ್ ಇಂಡಿಯಾ ಚಳುವಳಿ
5) 'ಗುಪ್ತಶಕೆ'